**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 18 ಪಿಡಬ್ಲ್ಯು 13

ದಿನಾಂಕಃ 17.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಸಂಗಮೇಶ ಐ ದಿಡಿಗಿನಾಳ

ವಯಸ್ಸು : 42 ವರ್ಷ

ಉದ್ಯೋಗ : ಪಿ ಐ

ವಾಸ ಸ್ಥಳ : ವಿದ್ಯಾಗಿರಿ ಪಿ ಎಸ್ ಧಾರವಾಡ.

**<u>ಮುಖ್ಯ ವಿಚಾರಣೆಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು 10.10.2013 ರಿಂದ 15.06.2017 ರವರೆಗೆ ಚಿಕ್ಕೋಡಿ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಎಂದು ಸೇವೆ ಸಲ್ಲಿಸಿದ್ದೇನೆ. 31.12.2014 ರಂದು ಮುಂಜಾನೆ 11.15 ಗಂಟೆಗೆ ನಾನು ನಾನು ಠಾಣಾ ಎಸ ಹೆಚ್ ಒ ದಲ್ಲಿದ್ದಾಗ ಕಮತೇನಟ್ಟಿ ಗ್ರಾಮದ ಕೋಷ್ಟಿ ಮನೆತನದವರು ಹೊಡೆದಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದರಿಂದ ನಾನು ಅಲ್ಲಿಗೆ ಹೋದಾಗ ಅಲ್ಲಿ ಗಾಯಾಳುಗಳು ಹೊಡೆದಾಡಿ ಅಂಬ್ಯುಲೆನ್ಸ ವಾಹನದಲ್ಲಿ ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದಾರೆ ತಿಳಿದಿದ್ದರಿಂದ ಅಲ್ಲಿ ಪೋಲಿಸ ಸಿಬ್ಬಂದಿಯನು ನೇಮಿಸಿ ವಾಪಸ್ಸುಠಾಣೆಗೆ ಬಂದೆ. ಅದೇ ದಿನ ಮದ್ಯಾಹ್ನ 01.30 ಗಂಟೆಗೆ ಚಾಸಾ 1 ಠಾಣೆಗೆ ಬಂದು ದೂರನ್ನು ಕೊಟ್ಟಿದ್ದನ್ನು ಪಡೆದುಕೊಂಡು ಗುನ್ನಾ ನಂಃ 258/2014 ರಡಿ

ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ಮತ್ತು ಮೂಲ ಫಿರ್ಯಾಧಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಗಳನ್ನು ಮೇಲಾಧಿಕಾರಿಗೆ ಕಳುಹಿಸಿದೆ. ಸಾಕ್ಷಿ ನಿಪಿ 4 ನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿ ಸಹಿ ನಿಪಿ 4(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದರಿಂದ ಇದನ್ನು ನಿಪಿ 10 ಸಾಕ್ಷಿ ಸಹಿ ನಿಪಿ 10(ಎ) ಎಂದು ಗುರುತಿಸಲಾಯಿತು. ಕೂಡಲೇ ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ಹೋದಾಗ ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗೆ ಬೆಳಗಾವಿ ಲೆಕ ವಿವ್ ಆಸ್ಪತ್ರೆಗೆ ತಗೊಂಡು ಹೋಗಿದ್ದಾರೆಂದು ಗೊತ್ತಾಗಿದ್ದರಿಂದ ನಾನು ಠಾಣೆಗೆ ವಾಪಸ್ಸು ಬಂದು ಘಟನಾ ಸ್ಥಳಕ್ಕೆ ಹೋಗಿ ಚಾಸಾ 3 ಮತ್ತು 4 ರ ಸಮಕ್ಷಮ ಚಾಸಾ 1 ತೋರಿಸಿದಂತೆ ಗುನ್ನೆ ಜಾಗೆ ಪಂಚನಾಮೆಯನ್ನು ಮದ್ಯಾಹ್ನ 03.00 ರಿಂದ 04.15 ಗಂಟೆಯವರೆಗೆ ಮಾಡಿ ಸ್ಥಳದಿಂದ 3 ಬಿದಿರಿನ ಬಡಿಗೆಗಳು ಅವುಗಳಲ್ಲಿ ಎರಡಕ್ಕೆ ಸಾಕಷ್ಟು ರಕ್ತ ಹತ್ತಿದ್ದು, 6 ಕಾಡುಕಟ್ಟಿಗೆಗಳು, ಐದು ಹಿಡಿಗಾತ್ರದ ಕಲ್ಲುಗಳು, ರಕ್ತ ಹತ್ತಿದ ಮಣ್ಣು, ಸಾದಾ ಮಣ್ಣನ್ನು ಪಂಚರ ಸಮಕ್ಷಮ ಜಪ್ತಿ ಮಾಡಿದೆ. ಅಲ್ಲಿ ಘಟನಾ ಸ್ಥಳದ ಕಚ್ಚಾನಕಾಶೆ ತೆಗೆದೆ. ಸಾಕ್ಷಿ ನಿಪಿ 3 ನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿ ನಿಪಿ 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕಾಶೆ ನೋಡಿ ಗುರುತಿಸಿದ್ದು ಇದನ್ನು ನಿಪಿ 11 ಎಂದು, ಸಾಕ್ಷಿ ಸಹಿ ನಿಪಿ 11(ಎ) ಎಂದು ಗುರುತಿಸಲಾಯಿತು. ಅದೇ

ದಿನ ಅಲ್ಲಿ ಚಾಸಾ 1 ರ ಮರುಹೇಳಿಕೆ, ಚಾಸಾ7 ರಿಂದ 9 ರ ಹೇಳಿಕೆ ಪಡೆದೆ. ನಂತರ ಠಾಣೆಗೆ ಬಂದಾಗ ಪ್ರತಿಪ್ರಕರಣ ದಾಖಲಾಗಿದ್ದು ಗೊತ್ತಾಗಿದ್ದರಿಂದ ಆ ಪ್ರಕರಣದ ಫಿರ್ಯಾಧಿ ಈ ಪ್ರಕರಣದ 6 ನೇ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಕೃತ್ಯ ಮಾಡಿದ್ದು ಒಪ್ಪಿಕೊಂಡಿದ್ದರಿಂದ ಅವರನ್ನು ಠಾಣೆಯಲ್ಲಿ ಯೋಗ್ಯ ಬೆಂಗಾವಲಿನಲ್ಲಿ ಇಟ್ಟೆ. ಜಪ್ತಿ ಮಾಡಿದ ವಸ್ತುಗಳ ಬಗ್ಗ ನ್ಯಾಯಾಲಯಕ್ಕೆ ಪಿ.ಎಫ ಸಲ್ಲಿಸಿದೆ.

2) 01.01.2015 ರಂದು ಬೆಳಗಾವಿ ಲೆಕ ವಿವ್ ಆಸ್ಪತ್ರೆಗೆ ಬೇಟಿ ನೀಡಿ ದಾಖಲಾಗಿದ್ದ ಮೃತ ಬಾಳಕೃಷ್ಣ ಇವರ ಹೇಳಿಕೆ ಪಡೆಯುವ ಸಲುವಾಗಿ ವೈದ್ಯರಿಗೆ ಅವರ ಆರೋಗ್ಯ ಸ್ಥಿತಿ ಕೇಳಿದಾಗ ಅವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲ ಎಂದು ಹೇಳಿದರು. ಅಲ್ಲಿ ದಾಖಲಾಗಿದ್ದ ಚಾಸಾ 10 ರಿಂದ 13 ರ ಹೇಳಿಕೆಗಳನ್ನು ಪಡೆದೆ. ನಂತರ ಠಾಣೆಗೆ ಬಂದು 6 ನೇ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿದೆ. 03.01.2015 ರಂದು 1, 7, 8 ಮತ್ತು10 ನೇ ಆರೋಪಿತರನ್ನು ಕಮತೇಟ್ಟೆ ಗ್ರಾಮದಲ್ಲಿ ಸಂಜೆ 6 ಗಂಟೆಗೆ ದಸ್ತಗೀರ ಮಾಡಿ ಠಾಣೆಗೆ ತಂದು ನಿಯಮಾವಳಿಗಳನ್ನು ಪಾಲಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದೆ. ಗಾಯಾಳು ಬಾಳಕೃಷ್ಣ ಕೋಸ್ಟ ಇವರ ಹೇಳಿಕೆ ಪಡೆಯಲು ಅವರ ಆರೋಗ್ಯದ ಬಗ್ಗೆ ವೈದ್ಯರಿಗೆ

ಪೋನ ಮಾಡಿ ಕೇಳಿದಾಗ ಇನ್ನೂ ಅವರು ಹೇಳಿಕೆ ಕೊಡುವ ಪರಿಸ್ಥಿತಿಯಲ್ಲಿ ಇಲ್ಲ ಎಂದು ಅವರು ಹೇಳಿದರು.

3) 09.01.2015 ರಂದು ಚಾಸಾ 11 ಚಿಕಿತ್ಸೆ ಪಡೆದು ತನ್ನ ಮತ್ತು ಮೃತ ಬಾಳಕೃಷ್ಣ , ಚಾಸಾ 10, ಇವರು ಧರಿಸಿದ ರಕ್ತ ಹತ್ತಿದ ಬಟ್ಟೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಸದರ ಆಸ್ಪತ್ರೆಯಲ್ಲಿ ಚಾಸಾ 5 ಮತ್ತು 6 ರ ಸಮಕ್ಷಮ ಸಂಜೆ 5 ರಿಂದ 6 ಗಂಟೆಯವರೆಗೆ ಪಂಚನಾಮೆ ಮಾಡಿ ಜಪ್ತಿ ಮಾಡಿದೆ. ಸಾಕ್ಷಿ ನಿಪಿ 9 ನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿ ನಿಪಿ 9(ಸಿ) ಎಂದು ಗುರುತಿಸಲಾಯಿತು. 11.01.2015 ರಂದು ಗಾಯಾಳು ಬಾಳಕೃಷ್ಣ ಮರಣ ಹೊಂದಿದ್ದ ಬಗ್ಗೆ ಆಸ್ಪತ್ರೆಯಿಂದ ಮಾಹಿತಿ ಬಂದಿದ್ದರಿಂದ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 302 ನ್ನು ಅಳವಡಿಸಿಕೊಂಡು ತನಿಖೆ ಮಾಡಲು ಅನುಮತಿ ಕೋರಿ ಪತ್ರ ಬರೆದೆ. ನಂತರ ಮಾನ್ಯ ನ್ಯಾಯಾಧೀಶರು ಅನುಮತಿ ನೀಡಿದ್ದರಿಂದ ನಾನು ಚಾಸಾ 17 ರ ಮುಖಾಂತರ ಜೊತೆಗೆ ಬೆಳಗಾವಿಯ ಲೆಕ ವಿವ್ ಆಸ್ಪತ್ರೆಗೆ ಹೋಗಿ ಶವ ಪಂಚನಾಮೆಯನ್ನು ಜರುಗಿಸಲು ಅಲ್ಲಿ ವ್ಯವಸ್ಥೆ ಇಲ್ಲದ್ದರಿಂದ ಶವವನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ರವಾನಿಸಿ ಅಲ್ಲಿ ಶವ ಪಂಚನಾಮೆಯನ್ನು ಚಾಸಾ 3 ಮತ್ತು 4 ರ ಸಮಕ್ಷಮ ಬೆಳಗ್ಗೆ 11 ರಿಂದ ಮಧ್ಯಾಹ್ನ 12.30 ರವರೆಗೆ ಪಂಚನಾಮೆ ಮಾಡಿದೆ. ಸಾಕ್ಷಿ ನಿಪಿ 1 ನ್ನು ನೋಡಿ ಗುರುತಿಸಿದ್ದುಸಾಕ್ಷಿ ಸಹಿ ನಿಪಿ 1(ಸಿ) ಎಂದು

ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ 2 ನ್ನು ತೆಗೆಸಿದೆ. ಚಾಸಾ 17 ರಿಗೆ ಶವವನ್ನು ಒಪ್ಪಿಸಿ ಮರಣೋತ್ತರ ಪರೀಕ್ಷೆ ಮಾಡಿಸಲು ಸೂಚಿಸಿದೆ. ಚಾಸಾ 1, 7, 10 ರಿಂದ 13 ರ ಮರುಹೇಳಿಕೆ ಪಡೆದೆ. ಅದೇ ದಿನ ಚಾಸಾ 17 ಮರಣೋತ್ತರ ಪರೀಕ್ಷೆ ಮುಗಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಿ ಪಾವತಿ ಬೇಷ್ಮಿಯೊಂದಿಗೆ ತನ್ನ ವರದಿ ಸಲ್ಲಿಸಿದರು. ಪ್ರಕರಣ ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ 20 ರಿಗೆ ವಹಿಸಿದ. ಸಾಕ್ಷಿ ನಿಪಿ 7 ನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿ ನಿಪಿ 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 8 ನ್ನು ನೋಡಿ ಗುರುತಿಸುತ್ತಾರೆ. ಅದರ ಮೇಲೆ ಸಾಕ್ಷಿ ಸಹಿ ಇರುವುದಿಲ್ಲ. ಸಾಕ್ಷಿ ತನ್ನ ಪತ್ರ ನೋಡಿ ಗುರುತಿಸಿದ್ದು ಇದನ್ನು ನಿಪಿ 12 ಎಂದು, ಸಾಕ್ಷಿ ಸಹಿ ನಿಪಿ 12(ಎ) ಎಂದು ಗುರುತಿಸಲಾಯಿತು.

4) 17.01.2015 ರಂದು ಉಳಿದ ಆರೋಪಿತರನ್ನು ದಸ್ತಗೀರ ಮಾಡಿ ಹಾಜರು ಪಡಿಸಲು ಚಾಸಾ 20 ರವರು ಮೆಮೋ ನೀಡಿದ್ದರಿಂದ 18.01.2015 ರಂದು ಸದರಿ ಆರೋಪಿತರು ಸಿಗದೇ ಇದ್ದ ಕಾರಣ ಅವರಿಗೆ ವರದಿ ಸಲ್ಲಿಸಿದೆ. 03.02.2015 ರಂದು ಆರೋಪಿತರನ್ನು ಆರೋಪಿತರನ್ನು ದಸ್ತಗೀರ ಮಾಡಿ ಹಾಜರು ಪಡಿಸಲು ಚಾಸಾ 20 ರವರು ಮೆಮೋ ನೀಡಿದ್ದು 04.02.2015 ರಂದು 3 ನೇ ಆರೋಪಿಗೆ ವಿಚಾರಣೆ ಮಾಡಿ ಬೆಳಗ್ಗ 10 ಗಂಟೆಗೆ ಚಾಸಾ 20 ರ ಮುಂದೆ ಹಾಜರು ಪಡಿಸಿದೆ. 06.02.2015 ರಂದು ಉಳಿದ ಆರೋಪಿತರನ್ನು

ದಸ್ತಗೀರ ಮಾಡಿ ಹಾಜರು ಪಡಿಸಲು ಚಾಸಾ 20 ರವರು ಮೆಮೋ ನೀಡಿದ್ದರಿಂದ 07.02.2015 ರಂದು ಆರೋಪಿತರು ಸಿಕ್ಕಿಲ್ಲ ಎಂದು ಚಾಸಾ 20 ರಿಗೆ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ಚಾಸಾ 20 ರವರು ನೀಡಿದ 3 ಮೆಮೋಗಳನ್ನು ನೋಡಿ ಗುರುತಿಸಿದ್ದು ಇವುಗಳನ್ನು ನಿಪಿ 13 ರಿಂದ 15 ಮತ್ತು ಸಾಕ್ಷಿ ತಾನು ನೀಡಿದ 3 ವರದಿಗಳನ್ನು ನೋಡಿ ಗುರುತಿದ್ದು ಇವುಗಳನ್ನು ನಿಪಿ 16 ರಿಂದ 18 ಎಂದು ಸಾಕ್ಷಿ ಸಹಿಗಳನ್ನು ನಿಪಿ 16(ಎ) ರಿಂದ 18(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 16 ನ್ನು ನೋಡಿ ಗುರುತಿಸುತ್ತಾರೆ. ನಾನು ದಸ್ತಗೀರ ಮಾಡಿ ಹಾಜರು ಪಡಿಸಿದ 6 ನೇ ಆರೋಪಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ. ಮಾನ್ಯ ನ್ಯಾಯಾಧೀಶರಿಗೆ ಕೊಟ್ಟ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ನಿಪಿ 19 ಎಂದು, ಸಾಕ್ಷಿ ಸಹಿ ನಿಪಿ 19(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>-** ಆರೋಪಿ ಪರ ಶ್ರೀ ಎಸ ಎನ ಪಿ ವಕೀಲರಿಂದಃ-

ಮುಂಜಾನೆ 11.15 ಕ್ಕೆ ನಾನು ಠಾಣೆಯಲ್ಲಿದ್ದಾಗ ಘಟನೆ ಬಗ್ಗೆ ಮಾಹಿತಿ ಬಂತು. ಯಾರು ಮಾಹಿತಿ ನೀಡಿದರು ಎಂದು ಈಗ ಸರಿಯಾಗಿ ಮಾಹಿತಿ ಇಲ್ಲ. ನಮ್ಮ ಠಾಣೆಯಿಂದ ಘಟನಾ ಸ್ಥಳ 15-20 ಕಿ.ಮೀ ದೂರ ಇದೆ. ನನಗೆ ಬಂದ ಮಾಹಿತಿಯನ್ನು ಎಸ ಹೆಚ ಡಿ ಯಲ್ಲಿ ನಮೂದಿಸಿದ್ದೇನೆ. ಘಟನಾ ಸ್ಥಳಕ್ಕೆ ಹೋದಾಗ

ಮದ್ಯಾಹ್ನ 12.00 ಗಂಟೆಯಾಗಿರಬಹುದು. ಅಲ್ಲಿ ಆರೋಪಿತರ ಫೈಕಿ ಎಷ್ಟು ಜನರಿದ್ದರು ಎಂದು ಈಗ ನೆನಪಿಲ್ಲ. ಆ ದಿನ ಆ ಸ್ಥಳದಲ್ಲಿ ಆರೋಪಿತರನ್ನು ನಾನು ವಶಕ್ಕೆ ಪಡೆದಿಲ್ಲ. ಸ್ಥಳದಲ್ಲಿ ಎಷ್ಟು ಜನ ಸಾಕ್ಷಿದಾರರು ಇದ್ದರು ಎಂದು ನನಗೆ ನೆನಪಿಲ್ಲ. ಚಾಸಾ 1 ಕೂಡ ಇರಲಿಲ್ಲ. ನಾನು ಮೊದಲಿನ ಬಾರಿ ಸ್ಥಳಕ್ಕೆ ಹೋದಾಗ ಪರಿಶೀಲನೆ ಮಾಡಿಲ್ಲ. ಸ್ಥಳದಲ್ಲಿ ರಕ್ತ ಬಿದ್ದಿದ್ದರಿಂದ ಮತ್ತು ಅಲ್ಲಿ ಕೋಸ್ಟಿಯವರ ಮನೆ ಮಾತ್ರ ಇದ್ದರಿಂದ ಘಟನಾ ಸ್ಥಳ ಇದೆ ಎಂದು ಖಚಿತಪಡಿಸಿಕೊಂಡೆ. ನನ್ನ ಜೊತೆ ಇಬ್ಬರು ಪೋಲಿಸ ಸಿಬ್ಬಂದಿ ಬಂದಿದ್ದರು. ಅಲ್ಲಿ ಒಬ್ಬ ಪೋಲಿಸ ಸಿಬ್ಬಂದಿಯನ್ನು ವಾಚ್ ಮಾಡಲು ಬಿಟ್ಟೆ, ಅವರ ಹೆಸರು ನೆನಪಿಲ್ಲ. ಇದನ್ನೆಲ್ಲಾ ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ 5-10 ನಿಮಿಷದಲ್ಲಿದ್ದೆ. ಚಾಸಾ 1 ಮತ್ತು ಅವರ ತಾಯಿ ಪೋಲಿಸ ಠಾಣೆಗೆ ಬಂದಿದ್ದರು. ಅವರಿಗೆ ಗಾಯಗಳಾಗಿದ್ದವು ಆದರೆ ಬ್ಯಾಂಡೇಜ ಇರಲಿಲ್ಲ. ಚಾಸಾ 1 ರಿಗೆ ಎಲ್ಲೆಲ್ಲಿ ಗಾಯಗಳಾಗಿದ್ದವು ಎಂದು ಹೇಳಲು ನೆನಪಿಲ್ಲ. ಅವರಿಬ್ಬರಿಗೆ ಗಾಯಗಳಾಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಲಿಖಿತ ಫಿರ್ಯಾಧಿ ತಗೊಂಡು ಬಂದಿದ್ದರು. ಫಿರ್ಯಾಧಿ ಕೊಟ್ಟ ದಿನ ಚಾಸಾ 1 ರ ಮರುಹೇಳಿಕೆ ಪಡೆದಿದ್ದೇನೆ.

2) ನಾನು ಪಂಚನಾಮೆ ಮಾಡಲು ಮದ್ಯಾಹ್ನ 03.00 ಗಂಟೆಗೆ ಸ್ಥಳದಲ್ಲಿ ಇದ್ದೆ.

ಘಟನಾ ಸ್ಥಳ ಚಾಸಾ 1 ರ ಮನೆ ಹಿಂದೆ ಇರುವ ರಸ್ತೆ ಅನ್ನುವದು ನಿಜ. ಆರೋಪಿತರು ತಮ್ಮ ಮನೆಗೆ ಸದರಿ ರಸ್ತೆ ಮುಖಾಂತರ ಹೋಗಬೇಕು ಅನ್ನುವದು ನಿಜ. ಮನೆಗಳು ಹೊಲದಲ್ಲಿವೆ ಅನ್ನುವದು ನಿಜ. ಅಲ್ಲಿ ಒಟ್ಟು 3 ಮನೆಗಳಿವೆ. ಅಲ್ಲಿ ಆರೋಪಿಗೆ ಒಂದು , ಫಿರ್ಯಾಧಿಗೆ ಒಂದು ಮತ್ತು ಅಣ್ಣಪ್ಪಾ ಕೋಸ್ಟಿಗೆ ಒಂದು ಇವರಿಗೆ ಸೇರಿ ಮೂರು ಮನೆಗಳಿವೆ. ಚಾಸಾ 1 ಮತ್ತು ಆರೋಪಿತರ ಮನೆ ಹೊಂದಿಕೊಂಡು ಇವೆ ಅನ್ನುವದು ನಿಜ. ಚಾಸಾ 1 ರ ಮನೆ ಮತ್ತು ಚಾಸಾ 13 ರ ಮನೆ ನಡುವೆ ಖುಲ್ಲಾ ಜಾಗೆ ಇದೆ ಅನ್ನುವುದು ನಿಜ. ಆ ಖುಲ್ಲಾ ಜಾಗೆಯಲ್ಲಿ ಘಟನೆಯಾಗಿರುತ್ತದೆ. ಆ ಖುಲ್ಲಾ ಜಾಗೆಯಿಂದ ರಸ್ತೆ ಸುಮಾರು 50 ಅಡಿ ಅಂತರ ಇದೆ. ಬಿದಿರಿನ ಬಡಿಗೆಗಳಿಗೆ ಮಳಿ ಹೊಡೆದಿದ್ದು ಕಂಡು ಬರಲಿಲ್ಲ. ಜಂಗಲಿ ಕಟ್ಟಿಗೆಗಳಿಗೂ ಮಳಿ ಹೊಡೆದಿದ್ದು ಕಂಡು ಬರಲಿಲ್ಲ. ಆ ಬಡಿಗೆಗಳು ಘಟನಾ ಸ್ಥಳದಿಂದ 15 ಅಡಿ ಅಂತರದಲ್ಲಿ ಬಿದ್ದಿದ್ದವು. ನಾನು ಒಟ್ಟು 09 ಬಡಿಗೆಗಳನ್ನು ಜಪ್ತಿ ಮಾಡಿದ್ದೇನೆ. ಘಟನಾ ಸ್ಥಳದಲ್ಲಿ ಬೇರೆ ಬಡಿಗೆಗಳು ಇರಲಿಲ್ಲ. ರಕ್ತ ಬೇರೆ ಬೇರೆ ಕಡೆ ಬಿದ್ದಿತು. ಒಂದು ಕಡೆ ಜಾಸ್ತಿ ರಕ್ತ ಬಿದ್ದಿತ್ತು. ಘಟನಾ ಸ್ಥಳದಲ್ಲಿ ಮೋಟಾರಸೈಕಲ ಇದ್ದದ್ದು ಗಮನಕ್ಕೆ ಬರಲಿಲ್ಲ. ಚಾಸಾ 1 ರ ಮನೆ ಒಳಗೆ ಮತ್ತು ಚಾಸಾ 13 ಮನೆ ಒಳಗೆ ಘಟನೆಯಾಗಿದ್ದ ಬಗ್ಗೆ ನನಗೆ ಏನು ಕುರುಹು ಸಿಗಲಿಲ್ಲ. ಚಾಸಾ 1 ಘಟನಾ ಸ್ಥಳ ತೋರಿಸಿದ್ದರು. ನಾನು ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿ

ಮು.ಮಾ.1 ರಿಂದ 16 ನ್ನು ಜಪ್ತಿ ಮಾಡಿದೆ ಮತ್ತು ಸಾಕ್ಷಿದಾರರ ಹೇಳಿಕೆ ಮತ್ತು ಮರುಹೇಳಿಕೆ ಪಡೆದೆ ಮತ್ತು 6 ನೇ ಆರೋಪಿಯನ್ನು ದಸ್ತಗೀರ ಮಾಡಿ ಚಾಸಾ 20 ರ ಮುಂದೆ ಹಾಜರು ಪಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

3) ಶವ ಪಂಚನಾಮೆ ಮಾಡುವ ಕಾಲಕ್ಕೆ ತಲೆ ಮೇಲೆ ಗಾಯಗಳು ಇದ್ದವು ಮತ್ತು ತಲೆ ಒಳಗೆ ಒಳಪೆಟ್ಟು ಆಗಿತ್ತು. ನಾನು ಪಂಚನಾಮೆ ಮಾಡುವ ಕಾಲಕ್ಕೆ ರಕ್ತಸ್ರಾವ ಆಗುವ ಗಾಯ ಕಂಡು ಬರಲಿಲ್ಲ. ಸಾಕ್ಷಿ ಆಗಾಗಲೇ 10 ದಿನ ಆಗಿತ್ತು ಎಂದು ಹೇಳುತ್ತಾರೆ. ಪಂಚನಾಮೆ ಕಾಲಕ್ಕೆ ಮೃತನ ತಲೆಗೆ ಆಪರೇಶನ ಮಾಡಿದ್ದು ಮತ್ತು ಬ್ಯಾಂಡೇಜ ಕಟ್ಟಿದ್ದು ಕಂಡು ಬರಲಿಲ್ಲ.

4) ಆರೋಪಿತರು ಫಿರ್ಯಾಧಿ ಮನೆಯವರ ಮೇಲೆ ಮಾಡಿದ ಪ್ರಕರಣದ ಬಗ್ಗೆ 31.12.2014 ರಂದು ರಾತ್ರಿ 10.00 ಗಂಟೆಗೆ ಗೊತ್ತಾಯಿತು. ನಾನು ಈ ಪ್ರಕರಣದ ತನಿಖೆಯನ್ನು ಚಾಸಾ 20 ರಿಗೆ ವಹಿಸುವಾಗ ಕೇಸ ಆ್ಯಂಡ ಕೌಂಟರ ಕೇಸ ಇದ್ದದ್ದು ಗೊತ್ತಾಗಿತ್ತು ಅನ್ನುವದು ನಿಜ. ಅಷ್ಟೊತ್ತಿಗೆ ನಾನು ಈ ಪ್ರಕರಣದ ಭಾಗಶಃ ತನಿಖೆ ಮಾಡಿದ್ದೆ ಅನ್ನುವದು ನಿಜ. ಕೇಸ ಆ್ಯಂಡ ಕೌಂಟರ ಕೇಸ ಇದ್ದಾಗ ಒಬ್ಬರೇ ತನಿಖಾಧಿಕಾರಿ ತನಿಖೆ ಮಾಡಬೇಕು ಎಂಬುದು ಕಾನೂನು ಗೊತ್ತಿದೆ. ಈ ಪ್ರಕರಣದಲ್ಲಿ ನಾನು ಸಂಪೂರ್ಣ ತನಿಖೆ ಮಾಡಿಲ್ಲ ಅನ್ನುವದು ನಿಜ. ನಾನು ಶವ ಪಂಚನಾಮೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಚಾಸಾ

1 ಮತ್ತು 13 ರ ಮನೆಗಳ ಹಂಚುಗಳು ಮತ್ತು ಬಾಗಿಲುಗಳು ಮುರಿದಿದ್ದು ಕಂಡು ಬರಲಿಲ್ಲ ಮತ್ತು ಆ ಬಗ್ಗೆ ಸಾಕ್ಷಿದಾರರು ನನ್ನ ಮುಂದೆ ಹೇಳಿಲ್ಲ ಅನ್ನುವದು ನಿಜ. ಘಟನೆಯಾಗಲು ಕಾರಣವಾಗಿದ್ದ ಹಿಂದಿನ ದಿನದ ಘಟನಾ ಸ್ಥಳಕ್ಕೆ ಹೋಗಿ ನಾನು ಪರಿಶೀಲನೆ ಮಾಡಿಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.